**ಸಾಕ್ಷಿಯು ದಿಃ 05.07.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಹೆಚ್.ವಿ.ಆರ್. ವಕೀಲರಿಂದ**

ನನ್ನ ತಂದೆ ಮೃತ ಗೋಪಾಲಯ್ಯ ರವರಿಗೆ ನಾನು ಮತ್ತು ಗೋಪಮ್ಮ ಇಬ್ಬರೇ ಮಕ್ಕಳು ಎಂದರೆ ಸರಿ. ನನ್ನ ತಂದೆ ಮೃತ ಗೋಪಾಲಯ್ಯ ರವರ ಆಸ್ತಿಯಲ್ಲಿ ನನಗೆ ಮತ್ತು ನನ್ನ ಅಕ್ಕ ಗೋಪಮ್ಮ ರವರಿಗೆ ಸಮಾನ ಹಕ್ಕು ಇದೆ ಎಂದರೆ ಸಾಕ್ಷಿಯು ನನ್ನ ಅಕ್ಕ ಮೃತ ಪಟ್ಟಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಅಕ್ಕ ಗೋಪಮ್ಮ ರವರಿಗೆ 4 ಜನ ಮಕ್ಕಳು, ಅವರುಗಳೆಂದರೆ 1 ರಿಂದ 3ನೇ ಪ್ರತಿವಾದಿಗಳು ಮತ್ತು ದೊಡ್ಡಮ್ಮ ಆಗಿರುತ್ತಾರೆ ಎಂದರೆ ಸರಿ. ಗೋಪಮ್ಮ ರವರ ಮೊದಲನೇ ಮಗ 1ನೇ ಪ್ರತಿವಾದಿಯ ಹೆಸರು ಸಿದ್ದಯ್ಯ ಅಲ್ಲ ಜವರಯ್ಯ ಎಂದರೆ ಸಾಕ್ಷಿಯು ಜವರಯ್ಯ ಅಥವಾ ಸಿದ್ದಯ್ಯ ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ. ಗೋಪಮ್ಮರವರ ಕೊನೆಯ ಮಗಳಾದ ದೊಡ್ಡಮ್ಮರವರು ಮೃತ ಪಟ್ಟಿದ್ದು ಅವರಿಗೆ 17 ವರ್ಷದ ಮಲ್ಲೇಶ್ ಎಂಬ ಮಗನಿದ್ದಾನೆ ಎಂದರೆ ಸರಿ. ಗೋಪಮ್ಮರವರ 3ನೇ ಮಗ 3ನೇ ಪ್ರತಿವಾದಿ ಕೃಷ್ಣ ರವರಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ್ದೇನೆ ಎಂದರೆ ಸರಿ. ನನ್ನ ಅಳಿಯ 3ನೇ ಪ್ರತಿವಾದಿಗೆ ಹೆಚ್ಚಿನ ಭಾಗಂಶ ಸಿಗಲಿ ಎಂದು ಅವರ ಸಹೋದರಿ ದೊಡ್ಡಮ್ಮ ರವರ ವಾರಸುದಾರರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಗೋಪಮ್ಮರವರ ಹಿಸ್ಸೆಗೆ ಬರುವ ಆಸ್ತಿಯಲ್ಲಿ ಅವರ 4 ಮಕ್ಕಳಿಗೂ ಸಮಾನ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ